# ಕುವೆಂಪು ವಿಶ್ವವಿದ್ಯಾಲಯ

ನಿರ್ದೇಶಕರ ಕಾರ್ಯಾಲಯ,

ದೂರ ಶಿಕ್ಷಣ ನಿರ್ದೇಶನಾಲಯ

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451, ಶಿವಮೊಗ್ಗ ಜಿಲ್ಲೆ, ಕರ್ನಾಟಕ.

ದೂರವಾಣಿ : 08282 256450 , 256246


ಸಂಖ್ಯೆ: ಕುವಿ/ವಿವೇ /ದೂಶಿನಿ -08 /2019-20/ 2430 ದಿನಾಂಕ:26-12-2019

## ಸುತ್ತೋಲೆ

ವಿಷಯ:- ಕರ್ನಾಟಕ ಸರ್ಕಾರದ ಎಸ್.ಎಸ್.ಪಿ. ಯೋಜನೆಯಡಿ ಮೆಟ್ರಿಕ್ ನಂತರದ ಶಿಷ್ಯವೇತನದ ಅರ್ಜಿ ಸಲ್ಲಿಸುವ ಕುರಿತು.

ಉಲ್ಲೇಖ: ಸುತ್ತೋಲೆ ಸಂಖ್ಯೆ: ಕುವಿ/ವಿವೇ /ದೂಶಿನಿ -08 /2369/2019-20 / ದಿ:18-12-2019

-**-

ಕರ್ನಾಟಕ ಸರ್ಕಾರವು ಹೊಸದಾಗಿ ಎಸ್.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 2019-20ನೇ ಶೈಕ್ಷಣಿಕ ಸಾಲಿನ ಮೆಟ್ರಿಕ್ ನಂತರದ ಶಿಷ್ಯವೇತನದ ಮಂಜೂರಾತಿಗಾಗಿ ದಿನಾಂಕ:31-12-2019ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವ ಸಂಬಂಧ ಕುವೆಂಪು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ನಿರ್ದೇಶನಾಲಯದ ಅಧೀನದಲ್ಲಿರುವ ಅಧ್ಯಯನ ಕೇಂದ್ರಗಳಲ್ಲಿ ಪ್ರವೇಶ ಪಡೆದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಸದರಿ ಯೋಜನೆಯಡಿಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕುರಿತು ಉಲ್ಲೇಖಿತ ಸುತ್ತೋಲೆಯ ಮೂಲಕ ಎಲ್ಲಾ ಸಂಯೋಜನಾಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಆದರೆ ಇದುವರೆವಿಗೂ ಅಧ್ಯಯನ ಕೇಂದ್ರದ ಮೂಲಕ ಪ್ರವೇಶಪಡೆದಿರುವ ವಿದ್ಯಾರ್ಥಿಗಳಿಂದ ಅರ್ಜಿ ಸಲ್ಲಿಕೆಯಾಗಿರುವುದಿಲ್ಲ.

ತತ್ಸಂಬಂಧ, ಸಂಯೋಜನಾಧಿಕಾರಿಗಳು ತಮ್ಮ ಅಧ್ಯಯನ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸುವ ಕುರಿತು ಗಮನಕ್ಕೆ ತರಲು ತಿಳಿಸುತ್ತಾ, ಅವರುಗಳಿಂದ ಈ ಕೆಳಕಂಡಂತೆ ಅಪ್‌ಲೋಡ್ ಮಾಡಿರುವ ಮೂಲ ದಾಖಲಾತಿಗಳನ್ನು ಇ-ಧೃಢೀಕರಣಕ್ಕಾಗಿ ದೂರಶಿಕ್ಷಣದ ಕಛೇರಿಗೆ ವಿದ್ಯಾರ್ಥಿಗಳೇ ಆಗಮಿಸಿ ಇ-ಧೃಢೀಕರಣ ಮಾಡಿಸಿಕೊಳ್ಳಲು ತಿಳಿಸುವಂತೆ ಈ ಮೂಲಕ ತಿಳಿಸಲಾಗಿದೆ.

### ವಿದ್ಯಾರ್ಥಿಗಳಿಂದ ಇ-ಧೃಢೀಕರಣಕ್ಕಾಗಿ ಸಲ್ಲಿಸಬೇಕಾದ ದಾಖಲಾತಿಗಳ ವಿವರ

1. ಅಪ್‌ಲೋಡ್ ಮಾಡಿರುವ ಅಂಕಪಟ್ಟಿಗಳ ಮೂಲ ಪ್ರತಿಗಳು.
2. ಪದವಿಗೆ ಪ್ರವೇಶಪಡೆದ ಪ್ರವೇಶ ಶುಲ್ಕದ ಚಲನ್ ಪ್ರತಿಯ ಮೂಲಪ್ರತಿ, ಅಥವಾ ವಿದ್ಯಾರ್ಥಿಗಳು ಶುಲ್ಕ ಪಾವತಿಸಿರುವ ಬಗ್ಗೆ ಸಂಯೋಜನಾಧಿಕಾರಿಗಳು ಧೃಢೀಕರಿಸಿ ನೀಡಿರುವ ಪತ್ರ ಈ ಕಛೇರಿಗೆ ಸಲ್ಲಿಸುವುದು.
3. ದೂರಶಿಕ್ಷಣ ನಿರ್ದೇಶನಾಲಯದ ಕಛೇರಿಯಿಂದ ಪಡೆದ ವ್ಯಾಸಂಗ ದೃಢೀಕರಣ ಪತ್ರ

26/12/19

ಉಪನಿರ್ದೇಶಕರು
ದೂರ ಶಿಕ್ಷಣ ನಿರ್ದೇಶನಾಲಯ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577 451

ಗೆ,

ಎಲ್ಲಾ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳಿಗೆ

**ಪ್ರತಿಗಳು:**

1. ಉಪಕುಲಸಚಿವರು, ದೂರ ಶಿಕ್ಷಣ ನಿರ್ದೇಶನಾಲಯ, ಕುವಿವಿ, ಶಂಕರಘಟ್ಟ
2. ಅಧೀಕ್ಷಕರು 01, 02 ಮತ್ತು 03 ದೂರ ಶಿಕ್ಷಣ ನಿರ್ದೇಶನಾಲಯ, ಕುವಿವಿ, ಶಂಕರಘಟ್ಟ
3. ಗಣಕ ವಿಭಾಗ, ದೂರ ಶಿಕ್ಷಣ ನಿರ್ದೇಶನಾಲಯ, ಕುವಿವಿ, ಶಂಕರಘಟ್ಟ-ವಿಶ್ವವಿದ್ಯಾಲಯದ ಅಧಿಕೃತ ಅಂತರ್ಜಾಲದಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.

Scanned by CamScanner